



# ಮೈಸೂರಿನ ರಾಜಮಾತೆಯರು

## ಮೈಸೂರು ಸಾಮ್ರಾಜ್ಯವನ್ನು ಪೊರೆದ ಮಾತೃ ಪರಂಪರೆಯ ಶಕ್ತಿರೂಪಿಣಿಯರ ನೆನಪು

**ರವೀಂದ್ರ ಭಟ್ಟ**

ಚಿತ್ರಗಳು: ವಿಶ್ವನಾಥ ಸುವರ್ಣ

ಮೈಸೂರು ದಸರಾ ಎಂದರೆ ಅದು ಶಕ್ತಿ ಸ್ವರೂಪಿಣಿ ಚಾಮುಂಡೇಶ್ವರಿಯ ಆರಾಧನೆ ಹಾಗೂ ವೈಭವದ ಮೆರವಣಿಗೆ. ನವರಾತ್ರಿ ಎನ್ನುವುದೂ ದೇವಿಯ ಆರಾಧನೆಯ ಸಂದರ್ಭ. ಈ ನವರಾತ್ರಿ–ದಸರೆ ಸಂದರ್ಭದಲ್ಲಿ ಮೈಸೂರು ಯದುವಂಶದ ರಾಜಮಾತೆಯರನ್ನು ನೆನಪಿಸಿಕೊಳ್ಳುವುದು ಅತ್ಯಂತ ಸೂಕ್ತ. ಕಿತ್ತೂರು ರಾಣಿ ಚನ್ನಮ್ಮನಂತೆ, ರಾಣಿ ಅಬ್ಬಕ್ಕನಂತೆ ಮೈಸೂರು ರಾಜಮಾತೆಯರು ಯುದ್ಧಪ್ರವೀಣರಲ್ಲ. ಆದರೆ ಮೈಸೂರಿಗೆ ಸ್ವತಂತ್ರ ವ್ಯಕ್ತಿತ್ವವನ್ನು ತುಂಬಿದವರು. ಪ್ರಜಾಪ್ರಭುತ್ವದ ಬೀಜ ಬಿತ್ತಿದವರು. ಆಧುನಿಕ ಆಡಳಿತದ ರುಚಿ ತೋರಿಸಿದವರು. ದೇವಾಜಮ್ಮಣ್ಣಿ, ಲಕ್ಷ್ಮಮ್ಮಣ್ಣಿ ಹಾಗೂ ಕೆಂಪನಂಜಮ್ಮಣ್ಣಿ – ಮೈಸೂರು ಸಾಮ್ರಾಜ್ಯದ ಅಸ್ತಿತ್ವ, ಅನನ್ಯತೆ ಉಳಿಯುವಲ್ಲಿ ಹಾಗೂ ವರ್ಚಸ್ಸು ಹೆಚ್ಚುವಲ್ಲಿ ಈ ಮೂವರು ರಾಜಮಾತೆಯರ ಪರಿಶ್ರಮ, ದೂರದರ್ಶಿತ್ವ ಹಾಗೂ ತ್ಯಾಗವಿದೆ. ದಸರೆಯ ಸಂದರ್ಭದಲ್ಲಿ ಆ ಮಹಾಮಾತೆಯರನ್ನು ಸ್ಮರಿಸುವ ಮೂಲಕ, ಕರ್ನಾಟಕ ಇತಿಹಾಸದ ‘ಮಾತೃ ಪರಂಪರೆ’ಯೊಂದನ್ನು ‘ಸುಧಾ’ ಓದುಗರ ಮುಂದಿಡುತ್ತಿದೆ.